# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು

## ಪ್ರಸರಣ ವಿಷಯದ (Circulation) ಸಭೆಯ ನಡವಳಿಗಳು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕಾರ್ಯಕಲಾಪಗಳ ನಿರ್ವಹಣೆ) ಹಾಗೂ ಜಲ (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ನಿಯಮಗಳ, ನಿಯಮ7 ರ ಅನ್ವಯ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡುವ ವಿಷಯವನ್ನು ಪ್ರಸರಣದ ಮುಖಾಂತರ ಪತ್ರ ಸಂಖ್ಯೆ.3597, ದಿನಾಂಕ: 19.9.2015 ರಲ್ಲಿ ಮಂಡಳಿಯ ಸದಸ್ಯರಿಗೆ ರವಾನಿಸಲಾಗಿತ್ತು.

| ವಿಷಯ ಸಂಖ್ಯೆ | ವಿಷಯ |
|---|---|
| 200:01: CR:/1/ 2015-16 | ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡುವ ಕುರಿತು<br>*****<br><br>ತೀವ್ರವಾಗಿ ಹೆಚ್ಚುತ್ತಿರುವ ಜನರ ಆರೋಗ್ಯದ ಸಮಸ್ಯೆಗಳಿಗೆ ಮಾಲಿನ್ಯವು ಸಹ ಒಂದು ಪ್ರಮುಖ ಕಾರಣವಾಗಿರುತ್ತದೆ. ಜನರು ಮಾಲಿನ್ಯದಿಂದಾಗಿ ಅನೇಕ ರೀತಿಯ ಖಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ರಾಜ್ಯದಲ್ಲಿಯೂ ಸಹ ಜನ ಸಾಮನ್ಯರೂ ಈ ರೀತಿ ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಜನ ಸಾಮಾನ್ಯರು ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಿಂದ ರೋಗಗ್ರಸ್ತ ಜನರು ವೈದ್ಯಕೀಯ ಚಿಕಿತ್ಸಾ ವೆಚ್ಚ ಭರಿಸಲಾಗದೇ, ಮಾನ್ಯ ಮುಖ್ಯ ಮಂತ್ರಿಗಳಿಗೆ ನಿವೇದನೆ ಸಲ್ಲಿಸಿ, ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ವೈದ್ಯಕೀಯ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಭರಿಸುವಂತೆ ಬೇಡಿಕೆ ಸಲ್ಲಿಸಿರುತ್ತಾರೆ. ಮಂಡಳಿಯು ಮಾಲಿನ್ಯ ನಿಯಂತ್ರಣದ ಮುಖ್ಯ ಉದ್ದೇಶದ ಜೊತೆ ವೈದ್ಯಕೀಯ ಚಿಕಿತ್ಸಾ ವೆಚ್ಚ ಭರಿಸಲಾಗದೇ ಇರುವ ಜನ ಸಾಮಾನ್ಯರಿಗೆ ಸಹಾಯ ಮಾಡುವುದರಿಂದ ಉದ್ದೇಶದ ಸಫಲತೆಗೆ ಪೂರಕವಾಗುತ್ತದೆ.<br><br>ಕಾರಣ, 2014–15ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹೂಡಿಕೆಗಳಿಂದ ಬಂದ ರೂ.53.23 ಕೋಟಿಗಳ ಬಡ್ಡಿಯಿಂದ ಬಂದ ಹಣದಿಂದ ರೂ.3.00 ಕೋಟಿಗಳ ದೇಣಿಗೆಯನ್ನು ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಗೆ ನೀಡಲು ವಿಷಯವನ್ನು ಪ್ರಸರಣದ ಮೂಲಕ ಕಳುಹಿಸಲಾಗಿತ್ತು. ಇದಕ್ಕೆ ಮಂಡಳಿಯ 13 ಸದಸ್ಯರು ಒಪ್ಪಿಗೆ ಸೂಚಿಸಿದ್ದು, ಒಬ್ಬ ಸದಸ್ಯರು ಮಂಡಳಿಯ ಸಭೆಯಲ್ಲಿ ಚರ್ಚಿಸಲು ಸೂಚಿಸಿರುತ್ತಾರೆ. ಉಳಿದ 3 ಸದಸ್ಯರುಗಳಿಂದ ನಿರ್ಣಯ ಸ್ವೀಕೃತವಾಗಿರುವುದಿಲ್ಲ. ಕರ್ನಾಟಕ ರಾಜ್ಯ ಮಾಲಿನ್ಯ |

| | |
|---|---|
| | ನಿಯಂತ್ರಣ ಮಂಡಳಿ (ಕಾರ್ಯಕಲಾಪಗಳ ನಿರ್ವಹಣೆ) ಹಾಗೂ ಜಲ (ನಿವಾರಣೆ ಮತ್ತು ಮಾಲಿನ್ಯ ನಿಯಂತ್ರಣ) ನಿಯಮಗಳ, ನಿಯಮ 7 ರ ಅನ್ವಯ 2/3 ಭಾಗದಷ್ಟು ಸದಸ್ಯರ ಒಪ್ಪಿಗೆ ಇರುವ ಕಾರಣ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ.3.00 ಕೋಟಿ (ರೂಪಾಯಿ ಮೂರು ಕೋಟಿಗಳು ಮಾತ್ರ) ದೇಣಿಗೆ ನೀಡಲು ಅನುಮತಿ ದೊರೆತಂತಾಗಿದೆ. |

ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಬೆಂಗಳೂರು

ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಬೆಂಗಳೂರು